# ಮೆತೂಷೆಲಹನು

ಸಂಗ್ರಹ : ಸುನಯನ ವಾಲ್ಟರ್ಸ್

**ನೋ**ಹನ ಅಜ್ಜನಾದ ಮೆತೂಷೆಲಹನ ಕಾಲದಲ್ಲಿ ಮನುಷ್ಯರಿಗೆ ದೀರ್ಘಾಯುಷ್ಯವಿತ್ತು. ಮೆತೂಷೆಲಹನು ಬಹಳ ಕಾಲ, ಅಂದರೆ 969 ವರುಷ ಬದುಕಿದನು. ಚಾರಿತ್ರಿಕವಾಗಿಯೂ ಅವನು ವಿಶಿಷ್ಟ ವ್ಯಕ್ತಿಯಾಗಿ ಕಂಡುಬಂದಿದ್ದಾನೆ. ಅವನ ತಂದೆಯಾದ ಹನೋಕನು ದೇವರೊಂದಿಗೆ ಬಹಳ ಅನ್ಯೋನ್ಯತೆಯಲ್ಲಿದ್ದ ವ್ಯಕ್ತಿ. ಅವನು ಭೂಮಿಯ ಮೇಲಿದ್ದದ್ದು 365 ವರುಷ. ಆದಿಕಾಂಡ 6:24ರಲ್ಲಿ ಬರೆದಿರುವ ಪ್ರಕಾರ – *"ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು."* ಅಂದರೆ ಅವನು ಸಾಯಲಿಲ್ಲ. ಯೇಸುಸ್ವಾಮಿಯ ಎರಡನೇ ಬರೋಣದ ಸಮಯದಲ್ಲಿ ಜೀವಿತರಾಗಿರುವ ವಿಶ್ವಾಸಿಗಳೂ ಸಾಯುವುದಿಲ್ಲ. ಅವರು ಆತನೊಂದಿಗೆ ಪರಲೋಕಕ್ಕೆ ಒಯ್ಯಲ್ಪಡುವರು.



ಹನೋಕನಿಗೆ ಮಗನು ಹುಟ್ಟಿದಾಗ ಅವನಿಗೆ ವಿಶೇಷವಾದ ಹೆಸರು ಇಡಲ್ಪಟ್ಟಿತು. "ಮೆತೂಷೆಲಹನು" ಎಂದರೆ "When he is dead, it shall be sent" (ಅವನು ಸತ್ತಾಗ ಅದು ಕಳುಹಿಸಲ್ಪಡುತ್ತದೆ) ಎಂದರ್ಥ.. ಈ ವಿಶಿಷ್ಟ ಹೆಸರು ಪಡೆದ ಅವನು ಬಹುಕಾಲ ಬದುಕಿದನು. ತನ್ನ 187ನೇ ವರ್ಷದಲ್ಲಿ ಅವನಿಗೆ ಲೆಮಕನು ಹುಟ್ಟಿದನು. ಲೆಮಕನು 182 ವರ್ಷವಾದಾಗ ನೋಹನನ್ನು ಪಡೆದನು. ಅಂದರೆ, ನೋಹನು ಹುಟ್ಟಿದಾಗ ಅವನ ಅಜ್ಜನಾದ ಮೆತೂಷೆಲಹನಿಗೆ 369 ವರ್ಷವಾಗಿತ್ತು.

ಮುಂದೆ ನೋಹನಿಗೆ 600 ವರುಷವಾದಾಗ ಜಲಪ್ರಳಯವಾಯಿತು ಎಂದು ಬರೆದಿದೆ (ಆದಿಕಾಂಡ 7:6). ಎಂದರೆ ಮೆತೂಷೆಲಹನಿಗೆ 969 ವರುಷವಾಗಿ ಅವನು ತೀರಿಕೊಂಡಾಗ ಜಲಪ್ರಳಯವಾಯಿತು – "ಅದು" ಕಳುಹಿಸಲ್ಪಟ್ಟಿತು!

"ನೋಹ" ಎಂಬ ಪದಕ್ಕೆ "ಉಪಶಮನ" ಎಂಬ ಅರ್ಥವಿದೆ. ಜಲಪ್ರಳಯವಾದಾಗ ನೋಹನ ಮಕ್ಕಳು, ಸೊಸೆಯಂದಿರು – ಹೀಗೆ 8 ಜನರು ಬಿಟ್ಟು ಎಲ್ಲಾ ಮನುಷ್ಯರು ಸತ್ತರು. ದೇವರು ಸೃಷ್ಟಿಸಿದ ಎಲ್ಲಾ ಜೀವಜಾತಿಗಳಲ್ಲಿ ಒಂದೊಂದು ಜತೆ ಉಳಿಸಲ್ಪಟ್ಟಿತು. *"ಮೂಗಿನಿಂದ ಶ್ವಾಸಬಿಡುವ ಭೂಜಂತುಗಳೆಲ್ಲಾ ಸತ್ತವು....* ಲಯವಾಗಿ ಹೋದವು. ನೋಹನೂ ಅವನೊಂದಿಗೆ ನಾವೆಯಲ್ಲಿದ್ದ ಜೀವಿಗಳು ಮಾತ್ರ ಉಳಿದರು" ಎಂದು ಆದಿಕಾಂಡ 7:23ರಲ್ಲಿ ಬರೆದಿದೆ. ಹೀಗೆ ಜೀವಕುಲದ ನಾಶನಕ್ಕೆ ಉಪಶಮನ ನೋಹನಿಂದ ಉಂಟಾಯಿತು.

ಹೀಗೆ ಎಂದೆಂದೂ ಕಾಣದಂತಹ ಭೀಕರ ವಿನಾಶವು ನಡೆದರೂ ಮನುಷ್ಯ ಜಾತಿಯು ಎಚ್ಚೆತ್ತುಕೊಳ್ಳಲಿಲ್ಲ. ದೇವರಿಗೆ ಅವಿಧೇಯರಾಗಿ, ಪಾಪದಲ್ಲಿ ಹೆಚ್ಚಲು ಮನುಷ್ಯರಿಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಆದರೆ ಯೇಸುವು ಬಂದನು. ದೇವಕುಮಾರನು ಮನುಷ್ಯ ಸಂಕುಲವನ್ನು ಪ್ರೀತಿಸಿ, ಕ್ರೂಜೆಯ ಮೇಲೆ ಬಲಿಯಾಗಿ ಸುರಿಸಿದ ರಕ್ತದಿಂದ ಎಲ್ಲ ಪಾಪ ಶುದ್ಧಿಯಾಯಿತು – ಸದಾಕಾಲಕ್ಕೂ! ಎಂಥಹ ಅದ್ಭುತ ಸಮಾಚಾರ! – ಆದರೆ ಒಂದೇ ನಿಬಂಧನೆ, ನಾವು ವಿಶ್ವಾಸಿಗಳಾಗಬೇಕು! ರಕ್ಷಣೆ ಹೊಂದಬೇಕು.

ಮನುಷ್ಯರಲ್ಲಿ ಉಳಿಸಲ್ಪಟ್ಟವರಲ್ಲಿ ಒಬ್ಬನಾದ ನೋಹನನ್ನು ನೆನಪಿಸಿಕೊಂಡಾಗ – ಅವನು ನಾವೆಯ ಬಾಗಿಲನ್ನು ತಾನಾಗಿ ಮುಚ್ಚಲಿಲ್ಲ ಎಂಬುದನ್ನು ನೆನಪಿಸಿಕೊಳ್ಳೋಣ! ಆ ಎಂಟು ಜನರು ಮತ್ತು ದೇವರಾದುಕೊಂಡಂತಹ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳು ಒಳ ಸೇರಿದ ಮೇಲೆ ದೇವರು ಆ ನಾವೆಯ ಬಾಗಿಲನ್ನು ಮುಚ್ಚಿದನು. ಬೇರಾರಿಗೂ ಆ ಬಾಗಿಲು ತೆರೆಯಲಿಲ್ಲ. ಅಂತೆಯೇ ದೇವರು ತಾನು ಆದುಕೊಂಡವರನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಂಡ ಮೇಲೆ ಪರಲೋಕದ ಬಾಗಿಲನ್ನು ತಾನೇ ಮುಚ್ಚುವನು – ಹೊರಗಿದ್ದವರಿಗೆ ಅದು ಎಂದೆಂದೂ ತೆರೆಯಲಾರದು! ■